# ಹಸಿರು ಹಾಡು (ಮಕ್ಕಳಕವನ ಸಂಕಲನ)

## ಮುನ್ನುಡಿ

ಪ್ರಿಯರಾದ ಶ್ರೀ ಪಳಕಳ ಸೀತಾರಾಮ ಭಟ್ಟ ಅವರನ್ನು ಪರೋಕ್ಷವಾಗಿ ನಾನು ಅನೇಕ ವರ್ಷಗಳಿಂದ ಬಲ್ಲೆ; ಪ್ರತ್ಯಕ್ಷವಾಗಿ ಕಂಡದ್ದು ಬಹುಶಃ ಆರೇಳು ವರ್ಷಗಳ ಹಿಂದಿರಬೇಕು. ಆ ನಮ್ಮ ಭೇಟಿಯಲ್ಲಿಯೇ ಅವರು ತಮ್ಮೊಂದು ಮಕ್ಕಳ ಗೀತೆಗಳ ಸಂಕಲನಕ್ಕೆ ನಾನು ನಾಲ್ಕು ಮಾತುಗಳನ್ನು ಬರೆದುಕೊಡಬೇಕೆಂದು ಕೇಳಿದರು; ನಾನು ಒಪ್ಪಿದೆ. ಅವರಂಥ ಸ್ನೇಹಶೀಲರ ಕೋರಿಕೆಗೆ ಯಾರೂ ಇಲ್ಲವೆನ್ನರು. ನಾನು ಮಕ್ಕಳ ಸಾಹಿತ್ಯವನ್ನು ರಚಿಸಿದವನಲ್ಲ. ಆದರೂ ಅದು ಹೇಗಿರಬೇಕು ಎಂದು ಯೋಚಿಸಿದವನು. ಆದ್ದರಿಂದ ಭಟ್ಟರ ಪುಸ್ತಕಕ್ಕೆ ನಾಲ್ಕು ಮಾತು ಬರೆಯುವುದು ತಪ್ಪಾಗಲಾರದೆಂದು ಭಾವಿಸಿದೆ. ಜೊತೆಗೆ ಭಟ್ಟರು ಆ ಕ್ಷೇತ್ರದಲ್ಲಿ ದೊಡ್ಡ ಪ್ರಮಾಣದಲ್ಲಿ ಕೆಲಸ ಮಾಡಿದ ಹಿರಿಯರು. ಅವರು ಈಗಾಗಲೇ ಎಂಬತ್ತಕ್ಕೂ ಹೆಚ್ಚು ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಅವೆಲ್ಲವೂ ಎಳೆಯರನ್ನೇ ಉದ್ದೇಶಿಸಿದವು. ಅವುಗಳಲ್ಲಿ ಸುಮರು ಇಪ್ಪತ್ತೆಂಟರಷ್ಟು ಮಕ್ಕಳ ಕವನ ಸಂಕಲನಗಳೇ ಆಗಿವೆ! ಇಂಥ ಲೇಖಕರ ಒಂದು ಪುಸ್ತಿಕೆಗೆ ನಾಲ್ಕು ಮಾತು ಬರೆಯುವುದು ಗೌರವದ ಕೆಲಸವೂ ಹೌದು. ನನ್ನಲ್ಲಿ ಇಂಥ ಗೌರವ ತೋರಿದ ಭಟ್ಟರಿಗೆ ಕೃತಜ್ಞನಾಗಿದ್ದೇನೆ. ಪ್ರೀತಿಯಿಂದ ಈ ನಾಲ್ಕು ಮಾತು ಬರೆಯುತ್ತಿದ್ದೇನೆ.

ಪ್ರಸ್ತುತ 'ಹಸಿರು ಹಾಡು' ಸಂಕಲನದಲ್ಲಿ ಮೂವತ್ತು ಕವನಗಳಿವೆ. 'ಹಸಿರು' ಇಂದಿನ ಅಗತ್ಯಗಳನ್ನು ಕುರಿತ ಒಂದು ಮಾತು. ಮನುಕುಲ ಅದರ ಮಹತ್ವವನ್ನು ನಿಧಾನವಾಗಿ ಅರ್ಥ ಮಾಡಿಕೊಳ್ಳುತ್ತಿದೆ. ಹಸಿರಿಲ್ಲದೆ ತನ್ನ ಉಸಿರಾಡದು ಎಂಬುದನ್ನು ಮನುಷ್ಯ ತಿಳಿದುಕೊಳ್ಳುತ್ತಿದ್ದಾನೆ. ಹಸರು ಹಾಡನ್ನು ಹಾಡೋಣ, ನೆಲವನ್ನು ಹಸಿರು ಮಾಡೋಣ ಎಂದು ಮಕ್ಕಳಿಗೆ ಕರೆ ಕೊಡುವ ಈ ಪದ್ಯ, ಹಸಿರಿನ ಮಹತ್ವದ ಬಗೆಗೆ ಮಾತಾಡಿದರೆ ಸಾಲದು, ಹಾಡು ಕಟ್ಟಿ ಹಾಡಿದರೆ ಸಾಲದು, ಮರಗಿಡಬಳ್ಳಿಗಳನ್ನು ನೆಟ್ಟು ಪೋಷಿಸಬೇಕು; ಭೂಮಿಯನ್ನು ಹಸಿರುಗೊಳಿಸಬೇಕು ಎಂದು ಹೇಳುತ್ತದೆ. ಸಸ್ಯ ಸಂಪತ್ತು ನಮ್ಮನ್ನಷ್ಟೇ ಅಲ್ಲ, ನಮ್ಮ ಮುಂದಿನ ತಲೆಮಾರುಗಳನ್ನು ಕಾಯುತ್ತದೆ ಎಂಬ ಚಿರಂತನ ಸತ್ಯವನ್ನು ಧ್ವನಿಸುತ್ತದೆ. ಈ ಧ್ವನಿ ಮಕ್ಕಳ ಹೃದಯವನ್ನು ಮುಟ್ಟಬೇಕು.

ಒಂದು ಪದ್ಯದಲ್ಲಿ 'ಮಗುವಿನ ಮಾತು' ತಂದೆ ತಾಯಿಗಳಿಗೊಂದು ಪಾಠವಿದೆ. ಚಿಕ್ಕಮಕ್ಕಳ ಕುತೂಹಲಗಳಿಗೆ ಕೊನೆಯಿಲ್ಲ. ಆದರೆ ಆ ಕುತೂಹಲಗಳ ತಣಿಸುವವರೇ ಇಲ್ಲ! ಹೊಸ ಹೊಸ ವಿಷಯಗಳನ್ನು ತಿಳಿಯುವ ಆಸಕ್ತಿಯಿಂದ ತಾಯಿ ಬಳಿಗೆ ಬಂದು ಪ್ರಶ್ನೆ ಕೇಳಿದರೆ ಅವಳು ಕೋಪಿಸಿಕೊಳ್ಳುತ್ತಾಳೆ; ಗದರುತ್ತಾ ಮಗುವಿಗೆ ಮತ್ತೊಂದು ಪ್ರಶ್ನೆ ಕೇಳಲು ಮನಸ್ಸಾಗುವುದೇ ಇಲ್ಲ. ಅಂಥ ಒಂದು ತಾಯಿಗೆ ಇಲ್ಲಿನ ಮಗು ಕೇಳುತ್ತದೆ;

ಹೊಸತು ವಿಷಯ ತಿಳಿಯಲೆಂದು
ಓಡಿ ನಿನ ಬಳಿಗೆ ಬಂದು
ನೂರು ಪ್ರಶ್ನೆ ಕೇಳಿದಾಗ
ಕೋಪವೇಕೆ ಹೇಳು ಬೇಗ.

ಯಾರು, ಏನು, ಏಕೆ, ಹೇಗೆ-ಎಂದು ಕೇಳಿದಾಗ ಜೋರು ಮಾಡಬೇಡ ಎಂದೂ ಆ ಮಗು ತಾಯಿಯನ್ನು ಬೇಡುತ್ತದೆ. ಅಷ್ಟೇ ಅಲ್ಲ, ನಾನು ಕೇಳುವ ಪ್ರಶ್ನೆಗಳಿಗೆಲ್ಲ ನೀನು ತಾಳ್ಮೆಯಿಂದ ಉತ್ತರ ಕೊಟ್ಟರೆ ಮಾತ್ರ ನಿನ್ನ ಚಿಣ್ಣ ಬೆಳೆಯುತ್ತಾನೆ, ಬೆಳಗುತ್ತಾನೆ ಎಂಬ ಸತ್ಯವನ್ನು ತಿಳಿಸುತ್ತದೆ!

ಆ ಬಗೆಯದೇ ಮತ್ತೊಂದು ಪದ್ಯ 'ಅಮ್ಮನೊಡನೆ', 'ಪುಟ್ಟನ ಪ್ರಶ್ನೆ' ಎನ್ನುವ ಇಂಥದೇ ಇನ್ನೊಂದು ಪದ್ಯದಲ್ಲಿ ನವುರಾದ ಹಾಸ್ಯವಿದೆ. ತನ್ನನ್ನು ಬಿಟ್ಟು ಫೋಟೋ ತೆಗೆಸಿಕೊಂಡ ತಂದೆ ತಾಯಿಗಳನ್ನು ತರಾಟೆಗೆ ತೆಗೆದುಕೊಳ್ಳುವ ನಮ್ಮ ಪ್ರೀತಿಯನ್ನು ಸುಲಭವಾಗಿ ಸಂಪಾದಿಸಿಕೊಳ್ಳುತ್ತದೆ! 'ಕಲಿತರೆ ಆಗದೆ ಮನೆಯಲ್ಲೆ? ಎಂಬ ಪದ್ಯ ನಮ್ಮ ಶಿಕ್ಷಣ ವ್ಯವಸ್ಥೆಯ ದುರವಸ್ಥೆಯನ್ನು ಒಂದು ಮಗುವಿನ ಬಾಯಿಂದ ಹೇಳಿಸುತ್ತದೆ. ಎಳೆಯರಿಗೆ ಇಂದಿನ ಶಿಕ್ಷಣ ಹೇಗೆ ಶಿಕ್ಷೆಯಾಗಿದೆ ಎಂಬುದನ್ನು ಈ ಪದ್ಯದಲ್ಲಿ ಪರಿಣಾಮಕಾರಿಯಾಗಿ ಚಿತ್ರಿಸಲಾಗಿದೆ.

ಮಕ್ಕಳಲ್ಲಿ ದೇಶಪ್ರೇಮ ಉಕ್ಕಿಸಲೂ ಇಲ್ಲಿನ ಪದ್ಯಗಳು ಪ್ರಯತ್ನಿಸಿವೆ; ಸಮಕಾಲೀನ ಸಮಸ್ಯೆಗಳ ಕಡೆಗೂ ಗಮನ ಹರಿಸಿವೆ. "ಪ್ರೀತಿಯೊಳೆಲ್ಲರ ತಬ್ಬಿಯೆ ಹಿಡಿವ; ನೆಲದಲೆ ಸ್ವರ್ಗವ ಸೃಷ್ಟಿಸಿ ಬಿಡುವ" ಎಂಬ ಸಂದೇಶವನ್ನು ನೀಡುವ ಇಲ್ಲಿನ ಪದ್ಯಗಳು ಹಲವು, ಮಕ್ಕಳಿಗೆ ಪ್ರಿಯವೆನ್ನಿಸುತ್ತವೆ ಎಂದುಕೊಂಡಿದ್ದೇನೆ. "ನಾವು ಭಾರತೀಯರು; ದೇಶ ನಮ್ಮ ದೇವರು" ಮೊದಲಾದ ಮಾತುಗಳು ಮಕ್ಕಳ ಮನಸ್ಸಿನಲ್ಲಿ ಚಿರಗೊಳ್ಳಬೇಕಾದಂಥವು; ಚಿರಗೊಳ್ಳುವಂಥವು, ಈ ಸಾಲುಗಳಿಗಿಂತ ದೊಡ್ಡ ಬೋಧನೆ ಏನಿದೆ?

ಒಂದೆ ಮನೆಯ ಮಂದಿ ನಾವು
ಬಂಧು ಬಳಗ ಎಲ್ಲವು;
ಪ್ರೀತಿ-ಕರುನೆ ಮೀರಿದಂಥ
ಧರ್ಮ ಬೇರೆ ಇಲ್ಲವು.

ಈ ಪದ್ಯದಲ್ಲಿ ಒಂದು ಮಗುವಿನ ಮೂಲಕ ಸೀತಾರಾಮಭಟ್ಟರೇ ಮಾತನಾಡುತ್ತಾರೆ! ಆದರೂ ಅವು ಭಾರ ಎನ್ನಿಸುವುದಿಲ್ಲ. ಮಕ್ಕಳಿಗಾಗಿ ಪದ್ಯ ಬರೆಯುವ ಅನೇಕರಿಗೆ, ತಾವು ಯಾರನ್ನು ಉದ್ದೇಶಿಸಿ ತಮ್ಮ ಪದ್ಯಗಳನ್ನು ಬರೆಯುತ್ತಿದ್ದೇವೆ ಎಂಬುದೇ ತಿಳಿದಿರುವುದಿಲ್ಲ. ಏನು ಬರೆದರೂ, ದೊಡ್ಡಕ್ಷರಗಳಲ್ಲಿ ಅಚ್ಚಾಗಿ ಬಿಟ್ಟರೆ ಮಕ್ಕಳ ಸಾಹಿತ್ಯವಾಗುತ್ತದೆಂದು ಅವರು ಭ್ರಮಿಸುತ್ತಾರೆ . ವ್ಯಾವಹಾರಿಕವಾಗಿಯೂ ಅಂಥವರನ್ನೇ ಪ್ರೋತ್ಸಾಹಿಸುವವರೂ ಇದ್ದಾರೆ. ಸೀತಾರಾಮ ಭಟ್ಟರಿಗೆ ಅವರ ಉದ್ದೇಶ ಸ್ಪಷ್ಟವಾಗಿದೆ. ಖಚಿತವಾಗಿದೆ; ದೀರ್ಘಕಾಲದ ಅನುಭವವಿದೆ. ಅಧ್ಯಾಪಕರಾಗಿ ಬಹಳ ಕಾಲ ಕೆಲಸ ಮಾಡಿರುವುದರಿಂದ, ಮಕ್ಕಳ ಮನಸ್ಸಿನ ಪರಿಚಯವಿದೆ. ಆದ್ದರಿಂದ ಬೋಧನೆಯ ನೆರಳಿನಲ್ಲಿಯೂ ಅವರು ಎಳೆಯರಿಗೆ ಪ್ರಿಯವಾಗುವಂತೆ ಬರೆಯಬಲ್ಲರು ಎಂಬುದಕ್ಕೆ ಈ ಸಂಕಲನ ಸಾಕ್ಷಿಯಾಗಿದೆ. ಇಲ್ಲಿನ ಪದ್ಯಗಳು ನಮ್ಮ ಮಕ್ಕಳನ್ನು ಆಕರ್ಷಿಸಲಿ, ತಮ್ಮ ಮಕ್ಕಳ ಮಾತು ಕೇಳದ ಪೋಷಕರಿಗೆ, ಈ ಪದ್ಯಗಳ ಮೂಲವಾಗಿದೆಯಾದರೂ ಆ ಮಾತುಗಳು ಕೇಳಿಸುವಂತಾಗಲಿ ಎಂದು ಹಾರೈಸುತ್ತೇನೆ.

ಶ್ರೀ ಪಳಕಳ ಸೀತಾರಾಮ ಭಟ್ಟರಿಗೆ ಎಲ್ಲ ಯಶಸ್ಸುಗಳೂ ಇರಲಿ; ಅವರ ಸಾಹಿತ್ಯ ಸೇವೆ ಸತತವಾಗಿ ನಡೆಯಲಿ; ಅದರಿಂದ ಕನ್ನಡ ಮಕ್ಕಳಿಗೆ ಲಾಭವಾಗಲಿ.

**– ಹಾ. ಮಾ. ನಾಯಕ**
'ಗೋಧೂಳಿ', ಜಯಲಕ್ಷ್ಮೀಪುರಂ
ಮೈಸೂರು - ೫೭೦೦೧೨

# ಲೇಖಕನ ಮಾತು

ಇದೊಂದು ಮಕ್ಕಳ ಕವನ ಸಂಕಲನ. ಪ್ರಾಥಮಿಕ ಶಾಲಾ ಹಂತದ ಮಕ್ಕಳನ್ನು ದೃಷ್ಟಿಯಲ್ಲಿ ಇರಿಸಿಕೊಂಡು ಇಲ್ಲಿನ ಕವನಗಳನ್ನು ರಚಿಸಲಾಗಿದೆ. ಆ ಮಕ್ಕಳು ಇವುಗಳ ಸದುಪಯೋಗ ಪಡೆದರೆ ನನ್ನ ಶ್ರಮ ಸಾರ್ಥಕವಾಗುವುದು.

ಈ ಕವನ ಸಂಗ್ರಹವು ಬೆಳಕು ಕಾಣಲು ಕಾರಣರಾದವರು ನನ್ನ ಆತ್ಮೀಯರೂ, ಹಿತೈಷಿಗಳೂ ಆದ ಬೆಂಗಳೂರು ಶ್ರೀ ಪ್ರೇಮಸಾಯಿ ಪ್ರಕಾಶನದ ಶ್ರೀ ಎ.ಎಸ್. ಭಟ್ ಮತ್ತು ಅವರ ಸಾಹಿತಿ ಪತ್ನಿ ಸೌ| ಪ್ರೇಮಾಭಟ್ ಅವರು. ಅವರಿಬ್ಬರ ಉಪಕಾರವನ್ನು ನಾನೆಂದೂ ಮರೆಯಲಾರೆ.

ಇಲ್ಲಿನ ಕವನಗಳನ್ನು ಓದಿ ನೋಡಿದವರು, ಮುನ್ನುಡಿಯ ಮೂಲಕ ನಾಲ್ಕು ಮೆಚ್ಚು ನುಡಿಯಾಡಿ, ಶುಭ ಹಾರೈಸಿದವರು ಹಿರಿಯ ಸಾಹಿತಿ ಮಿತ್ರರಾದ ಶ್ರೀ ಹಾ.ಮಾ.ನಾ. ಅವರು ಶ್ರೀಯುತರಿಗೆ ನನ್ನ ಹೃತ್ಪೂರ್ವಕ ವಂದನೆಗಳು.

ಅಂದವಾದ ಚಿತ್ರಗಳ ಮೂಲಕ ಈ ಪುಸ್ತಕದ ಮೆರುಗನ್ನು ಹೆಚ್ಚಿಸಿದವರು ಕಲಾವಿದ ಮಿತ್ರ ಶ್ರೀ ಮೋನಪ್ಪ ಅವರು ಇದರ ಅಕ್ಷರ ಜೋಡಣೆಯ ಕಾರ್ಯ ನಿರ್ವಹಿಸಿದವರು ಪ್ರತಿಭಾ ಪ್ರಿಂಟರ್ಸ್, ಬೆಂಗಳೂರು ಅವರು, ಇದನ್ನು ಅಂದವಾಗಿ ಮುದ್ರಿಸಿದವರು ಶ್ರೀ ಲಕ್ಷ್ಮೀ ಆರ್ಟ್ ಪ್ರಿಂಟರ್ಸ್, ಬೆಂಗಳೂರು ಅವರು. ಅವರೆಲ್ಲರಿಗೂ ನಾನು ಆಭಾರಿ.

**– ಪಳಕಳ ಸೀತಾರಾಮ ಭಟ್ಟ**
ಶಿಶು ಸಾಹಿತ್ಯ ಮಾಲೆ
ಮಿತ್ತಬೈಲು
೧೭-೫-೧೯೯೯

# ಪ್ರಾರ್ಥನೆ



ದೇವ ದೇವ-
ಜಗವ ಕಾವ
ಬಿಡದೆ ಸಲಹು ನಮ್ಮನು
ಕರುಣೆ ಬೀರಿ
ತೋರು ದಾರಿ
ಬೇಡುತಿಹೆವು ನಿನ್ನನು

ಕಳೆದ ಹೊತ್ತು
ಬರದು ಮತ್ತು
ಬೆಳಗ ಬೇಕು ಜೀವನ
ಅಂತೆ ಮುಂದೆ
ನಡೆಸು ತಂದೆ
ನಮಗೆ ನೀನೆ ಪಾವನ

ಗಾಳಿ ನೀರು
ಬೆಳಕು ಯಾರು
ಬೇರೆ ಕೊಟ್ಟುದಿಲ್ಲವು
ನೆಲದ ಮಣ್ಣು
ಹೂವು ಹಣ್ಣು
ನಿನ್ನ ಕೊಡುಗೆ ಎಲ್ಲವು

ದಿನವು ಅದಕೆ
ನಿನ್ನ ಪದಕೆ
ತಲೆಯ ಬಾಗಿ ಮಣಿವೆವು
ನಿನ್ನ ಪುಣ್ಯ
ನಾಮವನ್ನ
ನೆನೆದು ಕುಣಿದು ತಣಿವೆವು

* * *

# ಬಲೂನುವಾಲಾ



ಬಲೂನು ವಾಲಾ
ಬಂದನು ಬಾಲಾ
ಬೇಗನೆ ಬಾ ಬಾ ಹೊರಗೋಡಿ
ಬಗೆ ಬಗೆ ಬಣ್ಣ
ಸೆಳೆವುದು ಕಣ್ಣ
ಖುಷಿ ಪಡು ಬಾ ಬಾ ನೀ ನೋಡಿ

ಕೋಲಿಗೆ ತಾನು
ಸಾಲು ಬಲೂನು
ಸಿಕ್ಕಿಸಿ ಕೈಯಲಿ ಹಿಡಿದಹನು
“ಕೊಡುವೆನು ನಾನು
ಬೇಕೆ ಬಲೂನು?”
ಎನ್ನುತ ಕೂಗುತ ನಡೆದಿಹನು

ಕಾಸನು ತಂದು
ನೀಡುತ ನಿಂದು
“ಕೊಡು ನನಗೊಂದು” ಎಂದು ಬಿಡು,
ಕೊಂಡು ಬಲೂನು
ಹಾರಿಸಿ ನೀನು
ಕುಣಿ ಕುಣಿದಾಡಲು ಬಂದು ಬಿಡು

* * *

# ಪುಟ್ಟು ಎಲ್ಲಿ ಸಿಕ್ಕಿತು?



ಅಮ್ಮ ನಂಗೆ ಹೇಳು ನಿಂಗೆ

ಪುಟ್ಟು ಎಲ್ಲಿ ಸಿಕ್ಕಿತು?
ಸದ್ದು ಇಲ್ಲದಂತೆ ಮೆಲ್ಲ
ಹೇಗೆ ಕೋಣೆ ಹೊಕ್ಕಿತು?

ಆಟ ಇಲ್ಲ ಓಟ ಇಲ್ಲ
ಮಲಗಿದಲ್ಲೆ ಮಲಗಿದೆ
ಹಾಗೆ ಇದ್ದು ಚಿಕಣಿ ಮುದ್ದು
ಎಲ್ಲ ಕಣ್ಣ ಸೆಳೆದಿದೆ

ಬೆರಳು ಮುಷ್ಟಿ ಮಾಡಿ ಗಟ್ಟಿ
ಏನು ತಾನೆ ಹಿಡಿದಿದೆ?
ಕಾಲು ಕೈಯ ಥಕ್ಕ ಥೈಯ
ಕುಣಿವ ಕುಸ್ತಿ ನಡೆದಿದೆ

ಒಮ್ಮೆ ಅಳುವು ಮತ್ತೆ ಗೆಲುವು
ನಿಮಿಷದಲ್ಲೆ ನಿದ್ದೆಯು
ಉಚ್ಚೆ ಫಕ್ಕ ಜೊಲತೆಯೆ 'ಕಕ್ಕ'
ಹಾಸು ಹೊದಿಕೆ ಒದ್ದೆಯು

"ನಿನಗೆ ತಮ್ಮ ಬರುವ ನಮ್ಮ"
ಎಂದೆ ನೀನು ಆ ದಿನ
ಹೇಳೆ ಅಮ್ಮ ನನ್ನ ತಮ್ಮ
ಬಂದನೇನು ಈ ದಿನ?

***

# ಎಳೆಯನ ಕೊರಗು



ಅಪ್ಪ ದಿನಕೆ ಹಲವು ಬೀಡಿ

ಸೇದುತಾನೆ ನೋ-ಡ
ನನಗೆ ಮಾತ್ರ ಹೇಳುತ್ತಾನೆ
"ಬೀಡಿ ಸೇದ ಬೇ-ಡ"

"ಧೀರವೀರ ಆಗು ನೀನು"
ಎನುವ ಅಮ್ಮ ನಿ-ತ್ಯ
ಗುಮ್ಮನನ್ನು ಕರೆದು ನನ್ನ
ಹೆದರಿಸುವುದು ಸ-ತ್ಯ

ಬೀಡ ಜಗಿಯು ತಿರುವ ಅಜ್ಜ
ನುಡಿಯುತಾನೆ ಇಂ-ದು
ಮಕ್ಕಳೆಲ್ಲ ವೀಳ್ಯವನ್ನು
ತಿನ್ನಬಾರದೆಂ-ದು

ಮೂಗಿನೊಳಗೆ ಚಿಟಿಕೆ ನಶ್ಯ
ತುರುಕಿ ಅಜ್ಜಿ ತಾ- ನು
ಎನ್ನುತಾಳೆ, "ನಶ್ಯ ಬುರುಡೆ
ಮುಟ್ಟಬೇಡ ನೀ-ನು"

ಗಾಂಧಿ ತಾತ ನುಡಿದ ಹಾಗೆ
ಹಿಂಶೆ ನಮಗೆ ಸ-ಲ್ಲ
ಎನುವ ಗುರುವೆ ಬೆತ್ತ ಹಿಡಿದು
ಚಡಿಯ ಕೊಡುವರ-ಲ್ಲ

ನುಡಿಯು ಒಂದು ನಡೆಯು ಒಂದು
ಇರಲು ಹಿರಿಯರ- ಲ್ಲಿ
ಯಾರು ನಡೆಗೆ ದಾರಿ ನಮಗೆ
ತೋರಿಸುವರು ಇ- ಲ್ಲಿ?

* * *

## ಮುದ್ದು ಪುಟ್ಟಿಗೆ



ಐದು ಮತ್ತು ಐದು ಕೂಡಿ

ಹತ್ತು ಬೆರಳು ಒಟ್ಟಿಗೆ
ಎಡದ ಬಲದ ಕೈಗಳಲ್ಲಿ
ನಮ್ಮ ಮುದ್ದು ಪುಟ್ಟಿಗೆ

ಅತ್ತ ಒಂದು ಇತ್ತ ಒಂದು
ಕಂಗಳೆರಡು ಒಟ್ಟಿಗೆ
ನಡುವೆ ಮೂಗು ಕೆಳಗೆ ಬಾಯಿ
ನಮ್ಮ ಮುದ್ದು ಪುಟ್ಟಿಗೆ

ಬಲಕೆ ಒಂದು ಎಡಕೆ ಒಂದು
ಕಿವಿಗಳೆರಡು ಒಟ್ಟಿಗೆ
ತಲೆಯು ಒಂದು ಕಾಲು ಎರಡು
ನಮ್ಮ ಮುದ್ದು ಪುಟ್ಟಿಗೆ

ಗಲ್ಲ ನೋಡು ಕೆನ್ನೆ ಜೋಡು
ತುಟಿಗಳೆರಡು ಒಟ್ಟಿಗೆ
ಕೆಳಗೆ ಕತ್ತು ಎದೆಯು ಮತ್ತು
ಹೊಟ್ಟೆ ನಮ್ಮ ಪುಟ್ಟಿಗೆ

* * *

# ಡಾಕ್ಟರ್ ಮಾಮಾ




ಡಾಕ್ಟರ್ ಮಾಮಾ
ಡಾಕ್ಟರ್ ಮಾಮಾ
ನಮ್ಮಯ ಹತ್ತಿರ ಬರಬೇಡಿ
ಹೇಳುವೆ ಈಗ
ಬಂದರು ಬೇಗ
ಚುಚ್ಚುವ ಸೂಜಿಯ ತರಬೇಡಿ

ಮಕ್ಕಳಿಗೆಂದು
ಬೇರೆಯೆ ಒಂದು
ಮದ್ದೇ ನಿಮ್ಮಲಿ ಇರಬೇಕು
ಅದರಲಿ ಎಲ್ಲ
ಸಕ್ಕರೆ ಬೆಲ್ಲ
ತುಂಬಿಸಿ ಮೆಲ್ಲನೆ ಇಡಬೇಕು

ಹಾಗೆಯೆ ನೀವು
ಮಾಡಲು ನಾವು
ನಿಮ್ಮಲಿ ಪ್ರೀತಿಯ ಇಟ್ಟೇವು
"ಮಾಮಾ" ಎಂದು
ನಗುತಲಿ ಬಂದು
ನಿಮಗೂ ಮುದ್ದನು ಕೊಟ್ಟೇವು

* * *

# ಕಿಟ್ಟನ ಪ್ರಶ್ನೆ



ಎಲ್ಲಿ ಇರುವೆ ಅಮ್ಮ ನೀನು
ಇಲ್ಲಿ ನಿನ್ನ ಕರೆವೆ ನಾನು
“ಬಂದೆ ಪುಟ್ಟ” ಎಂದು ಹೇಳು
“ಏನು ಪುಟ್ಟ?” ಎಂದು ಕೇಳು

ಪ್ರೀತಿಯಮ್ಮ ನಿನಗೆ ಇಂದು
ಉಂಟು ನನ್ನ ಪ್ರಶ್ನೆ ಒಂದು
ಕೋಪಗೊಳದೆ ನೀನು ಈಗ
ಉತ್ತರಿಸಲೆ ಬೇಕು ಬೇಗ

ದಿನವು ತಬ್ಬಿ ಹಿಡಿದು ನನ್ನ
ಮುದ್ದಿಸುತ್ತ, “ಚಿನ್ನ-ರನ್ನ”
ಎಂದು ಹೊಗಳುತ್ತಿದ್ದರೇನು?
ಮರೆವುದುಂಟು ನನ್ನ ನೀನು

ಅಂದು- ನಿನ್ನ ಮದುವೆಯಂದು
ಅಪ್ಪನೊಡನೆ ನಗುತ ನಿಂದು
ಫೋಟೋ ತೆಗೆಸಿಕೊಂಡೆಯಲ್ಲ?
ಏಕೆ ನನ್ನ ಕರೆಯಲಿಲ್ಲ?

* * *

# ಬಂದಳು ಪುಟ್ಟಿ



ಪುಟು ಪುಟು ಪುಟು ಪುಟು
ಬಂದಳು ಪುಟ್ಟಿ
ಪುಟ್ಟದು ಬೊಂಬೆಯ
ತಂದಳು ಪುಟ್ಟಿ

ಕೈಯಲಿ ಹಿಡಿದೇ
ನಿಂದಳು ಪುಟ್ಟಿ
“ಮುದ್ದಿನ ಪಾಪಾ”
ಎಂದಳು ಪುಟ್ಟಿ

ಬೊಂಬೆಯ ಚೆಲುವನು
ಕಂಡಳು ಪುಟ್ಟಿ
ಭಾರೀ ಸಂತಸ
ಉಂಡಳು ಪುಟ್ಟಿ

ಬೊಂಬೆಯ ತಬ್ಬಿಯೆ
ಹಿಡಿದಳು ಪುಟ್ಟಿ
ಲೊಚ ಲೊಚ ಮುದ್ದಿಸಿ
ನುಡಿದಳು ಪುಟ್ಟಿ-

“ನಗು ನಗು ಕಂದಾ
ಅಳದಿರು ಗಟ್ಟಿ
ತಿನ್ನಲು ಕೊಡುವೆನು
ಬಿಸ್ಕತು ರೊಟ್ಟಿ”

* * *

# ಏಕೆ ಹೇಳು?



ಅಮ್ಮ ನನ್ನ ಮಾತು ಒಂದು
ಕಿವಿಯ ಕೊಟ್ಟು ಕೇಳು
ಏಕೆ ನಿನ್ನ "ಮಮ್ಮಿ"ಯೆಂದು
ಕರೆಯಬೇಕು ಹೇ-ಳು?

ಅಪ್ಪನನ್ನು ಅಪ್ಪ ಎಂದು
ಎನುವ ಬದಲು ಕೇ-ಳು
"ಡ್ಯಾಡಿ"ಯೆಂದು ಏಕೆ ಇಂದು
ಕರೆಯಬೇಕು ಹೇ- ಳು?

ನಿನ್ನ ಮಾತು ನನ್ನ ಮಾತು
ಕನ್ನಡವಿದೆ ಕೇ-ಳು
ಈಗ ನಮಗೆ ಬೇರೆ ಮಾತು
ಏಕೆ ಬೇಕು ಹೇ- ಳು?

ಕನ್ನಡದಲಿ ಕಲಿವ ಇಷ್ಟ
ಉಂಟು ನನಗೆ ಕೇ-ಳು
ಇಂಗ್ಲಿಷಿನಲೆ ಕಲಿವ ಕಷ್ಟ
ಕೊಡುವೆ ಏಕೆ ಹೇ- ಳು?

* * *

# ಪುಟ್ಟ - ಕಿಟ್ಟ




ಬರ್ರ ಗಾಳಿ ಬೀಸಿ ಬಂದು
ಕೊಂಬೆ ರೆಂಬೆ ಅಲುಗಿ ನಿಂದು
ಮರದ ಮೇಲೆ ಇದ್ದವು
ಹಣ್ಣು ಕೆಳಗೆ ಬಿದ್ದವು

ಬಿದ್ದ ಹಣ್ಣ ಕಂಡು ಸಟ್ಟ
ಎದ್ದು ಬಂದು ಪುಟ್ಟ - ಕಿಟ್ಟ
ಹಣ್ಣು ಹೆಕ್ಕಿ ತಂದರು
ತಂದ ಹಣ್ಣು ತಿಂದರು

ಹಣ್ಣು ತಿಂದು ಚೆಣ್ಣರಂದು
ಹಿಗ್ಗುಗೊಂಡು ನಗುತ ನಿಂದು
ಕೈಯ ಕೈಯ ಹಿಡಿದರು
ಥಕ್ಕ ಥೈಯ ಕುಣಿದರು

* * *

# ಸರ್ಕಸ್ ಮೃಗಗಳು



ಪುಟ್ಟನು ಕಿಟ್ಟನು ಒಟ್ಟಿಗೆ ಓಡಿ
ಅಣ್ಣನ ಅಕ್ಕನ ಜೊತೆಯಲಿ ಕೂಡಿ
ಸರ್ಕಸ್ ಮೃಗಗಳ ನೋಡಿದರು
ಖುಷಿಯಲಿ ಕುಣಿಕುಣಿದಾಡಿದರು

ಪಳಗಿದ ಸಿಂಹವು ಅಲ್ಲಿಯೆ ಇತ್ತು
ಗೂಡಿನ ಹುಲಿಯೂ ಕಣ್ಣಿಗೆ ಬಿತ್ತು
ಆನೆಯು ಒಂದೆಡೆ ನಿಂದಿತ್ತು
ಒಂಟೆಯು ಅಲ್ಲಿಗೆ ಬಂದಿತ್ತು

ನರಿಯೂ ತೋಳವು, ಕರಡಿಯು ಮತ್ತೆ
ಮಂಗವು, ಹಂದಿಯು, ಜಿಂಕೆಯು, ಕತ್ತೆ
ಇದ್ದವು ಮೊಲಗಳು ಒಂದು ಕಡೆ
ಯಾರೂ ತೊಂದರೆ ಮಾಡದೆಡೆ

ಮಕ್ಕಳು ಎಲ್ಲೆಡೆ ಸುತ್ತಿಯೆ ಬಂದು
ಅಲ್ಲಿಯೆ ಕಾಡಿನ ಮೃಗಗಳ ಕಂಡು
ಪ್ರಶ್ನೆಯ ಕೇಳುತ ಹಲವಾರು
ತಿಳಿದರು ಸಂಗತಿ ನೂರಾರು

* * *

# ಚಿಕಣಿ ರಂಭೆ



ಮನೆಯಲಿಂದು ಉಂಟು ಒಂದು
ನಡೆವ ಪುಟ್ಟ ಬೊಂ - ಬೆ
ಏನೊ ಮಾಡಿ ಆಡಿ ಹಾಡಿ
ನಲಿವ ಚಿಕಣಿ ರಂ- ಭೆ

ಮನೆಯಲಿದ್ದೆ ಬಿದ್ದು ಎದ್ದೆ
ಸಾಗುವುದಿದು ಮೈ- ಲು
ಮೊಲೆಯನುಣುವ ಮಣ್ಣು ತಿನುವ
ಅಂಬೆಗಾಲ ರೈ- ಲು

ಅತ್ತ ನೋಡಿ ಇತ್ತ ಓಡಿ
ಕಂಡುದನ್ನು ಹೆ- ಕ್ಕಿ
ನಿಮಿಷದೊಳಗೆ ಬಾಯಿಯೊಳಗೆ
ಇಕ್ಕಿ ಬಿಡುವ ಹ- ಕ್ಕಿ

ಒಮ್ಮೆ ನಗುವು ಮತ್ತೆ ಅಳುವು
ಘಳಿಗೆಯೊಳಗೆ ನಿ- ದ್ದೆ
ಏನು ಗೆಲುವು ಎಂಥ ಚೆಲುವು!
ಮುದ್ದಿನದಿದು ಮು- ದ್ದೆ

* * *

# ನಿದ್ದೆಗೆ




ನಿದ್ದೇ ನಿದ್ದೇ ನೀ ಬಂದಿದ್ದೆ
ಓದಲು ಕುಳಿತಾಗ
ನನ್ನಯ ಕಂಗಳ ಕದ ಮುಚ್ಚಿದ್ದೆ
ಸದ್ದಿಲ್ಲದೆ ಬೇಗ

ನಿದ್ದೇ ನಿದ್ದೇ ನೀ ಬಂದಿದ್ದೆ
ಬರೆಯುತ ಇರುವಂದು
ಪುಸ್ತಕ ಸೆಳೆದು ಕೆಳ ಹಾಕಿದ್ದೆ
ನನ್ನ ಬಳಿಗೆ ಬಂದು

ನಿದ್ದೇ ನಿದ್ದೇ ನೀ ಬಂದಿದ್ದೆ
ಗಣಿತದ ಪಾಠಕ್ಕೆ
ಎಣಿಕೆಯು ತಪ್ಪಲು ನಾ ಅತ್ತಿದ್ದೆ
ನಿನ್ನಯ ಕಾಟಕ್ಕೆ

ನಿದ್ದೇ ನಿದ್ದೇ ನಾನಿದೊ ಎದ್ದೆ
ಎಚ್ಚರಿಸುವೆ ಖುದ್ದು
ಕೆಲಸಕೆ ತೊಂದರೆ ಮಾಡಲು ಬಂದರೆ
ಓಡಿಸುವೆನು ಒದ್ದು

* * *

# ಅಮ್ಮನೊಡನೆ



ಅಮ್ಮ ನಿನ್ನ ಬೇಡುತೇನೆ
ಒಂದು ಮಾತು ಆಡುತೇನೆ
ಮನಸು ಕೊಟ್ಟು ಕೇಳು ಬಾ
ಉತ್ತರವನು ಹೇಳು ಬಾ

ಬಿಳಿಯ ಹಾಳೆಯಲ್ಲಿ ಅಣ್ಣ
ಬಳಸಿಕೊಂಡು ಹಲವು ಬಣ್ಣ
ಏನೊ ಏನೊ ಚಿತ್ರ ಮಾಡಿ
ಹಿಗ್ಗುತಿರಲು ನೋಡಿ ನೋಡಿ

ಬಂದು ಅವನ ಕಂಡರೇನು?
ಜೋರು ಮಾಡಲಿಲ್ಲ ನೀನು
"ಎಂಥ ಚಂದ ಚಿತ್ರ!" ಎಂದೆ
ಮೆಚ್ಚಿ ಹೊಗಳಿ ನಗುತ ನಿಂದೆ

ನಾನು ಮಸಿಯ ತುಂಡು ತಂದು
ಗೋಡೆ ಚಿತ್ರ ಬಿಡಿಸಿ ದಂದು
ಅಮ್ಮ ನೀನು ಬಂದು ಬಿಟ್ಟೆ
ಸಿಟ್ಟುಗೊಂಡು ಪೆಟ್ಟು ಕೊಟ್ಟೆ

ಅಣ್ಣ ಕೆಲಸ ಮಾಡಿದಾಗ
ಹೊಗಳಿದವಳು ನೀನು ಈಗ
ಕೋಪಿಸಿದ್ದು ಸರಿಯೆ, ನಾನು
ನಿನ್ನ ಮಗುವೆ ಅಲ್ಲವೇನು?

* * *

# ಗಾಂಧಿ ತಾತ



ಮಗುವಿನಂಥ ನಗೆಯ ಮೊಗದ
ಗಾಂಧಿ ತಾತನು
ಪ್ರೀತಿಯಿಂದ ಲೋಕವನ್ನೆ
ಗೆಲಿದ ಖ್ಯಾತನು

ಪಾರತಂತ್ರ್ಯ ತೊಲಗಿಸಿದನು
ದೇಶ ನಾಯಕ
ದೀನ ದುಃಖಿ ಜನರ ಬಂಧು
ಜಗದ ಸೇವಕ

ಶಾಂತಿಯಿಂದ ಕ್ರಾಂತಿ ತಂದ
ಅಮರ ಕೀರುತಿ
ನಯ-ವಿನಯವೆ ರೂಪು ತಳೆದ
ಸತ್ಯ ಮೂರುತಿ

ನಮಗೆ ಅವನು ರಾಷ್ಟ್ರಪಿತನು
ಮಾರ್ಗದರ್ಶಕ
ತತ್ವಜ್ಞಾನಿ, ತ್ಯಾಗಿ, ಯೋಗಿ
ನೀತಿ ಬೋಧಕ

* * *

# ಜಯ ಭಾರತಕೆ



ಜಯ ಜಯ ಜಯ ಜಯ ಭಾರತಕೆ
ಜಯ ಜಯ ನಮ್ಮಯ ಜನಗಣಕೆ

ಭಾರತ ಮಾತೆಯ ಮಕ್ಕಳು ನಾವು
ನಮ್ಮದು ಸೋದರ ಸಂಬಂಧ
ಒಮ್ಮನದಲಿ ಮನ್ನಡೆಸಲಿ ನಮ್ಮನು
ಸಕ್ಕರೆ ಪ್ರೀತಿಯ ಸವಿಗಂಧ

ಭಾಷೆಯು, ಧರ್ಮವು, ಜಾತಿಯು, ರೀತಿಯು
ಬಗೆ ಬಗೆಯಾದರು ನಾವೆಂದೂ
ವಿವಿಧತೆಯಲ್ಲೇ ಏಕತೆ ಮೆರೆಯಿಸಿ
ಬೆಳೆಸುತ ಬೆಳಗಿದ ಜನವೊಂದು

ನಿಜವಿದನರಿಯುತ ಕೂಡಿಯೆ ದುಡಿದರೆ
ಸೌಖ್ಯದ ಸ್ವರ್ಗವೆ ಇಲ್ಲುಂಟು
ಸೃಷ್ಟಿಯ ಸಂಪದ ಸೊಬಗೂ ತುಂಬಿದ
ಇಂತಹ ದೇಶವು ಎಲ್ಲುಂಟು?

* * *

# ಮಗುವಿನ ಮಾತು



ಅಮ್ಮ ಇಂದು ಮಾತು ಒಂದು
ಆಡುತೇನೆ
ಪ್ರೀತಿಯಿಂದ ಕೇಳು ಎಂದೆ
ಬೇಡುತೇನೆ

ಹೊಸತು ವಿಷಯ ತಿಳಿಯಲೆಂದು
ಓಡಿ ನಿನ್ನ ಬಳಿಗೆ ಬಂದು
ನೂರು ಪ್ರಶ್ನೆ ಕೇಳಿದಾಗ
ಕೋಪ ಏಕೆ ಹೇಳು ಬೇಗ?

ಸುತ್ತ ಮುತ್ತ ಕಂಡ ಹಾಗೆ
ಯಾರು? ಏನು? ಏಕೆ? ಹೇಗೆ?
ಎಂದು ಕೇಳಿದಾಗ ನಾನು
ಜೋರು ಮಾಡಬೇಡ ನೀನು

ತಾಳ್ಮೆಯಿಂದ ಪ್ರಶ್ನೆ ಕೇಳಿ
ತಕ್ಕ ಹಾಗೆ ತಿಳಿವು ಹೇಳಿ
ಮುಂದೆ ನಡೆಸಿದಾಗ ನನ್ನ
ಬೆಳಗಿಯಾನು ನಿನ್ನ ಚೆಣ್ಣ

* * *

# ನಾನು ಸೇನೆಗೆ ಸೇರುವೆನು



ನಾನೂ ಸೇನೆಗೆ ಸೇರುವೆನು
ಧೈರ್ಯವ ಶೌರ್ಯವ ತೋರುವೆನು

ಹುಡುಗನು ಇಂದಿಗೆ ನಾನಾಗಿದ್ದರು
ನಾಳೆಗೆ ದೊಡ್ಡವನಾಗುವೆನು
ಜಟ್ಟಿಯ ಹಾಗೆಯೆ ಗಟ್ಟಿಗನಾಗುತ
ವಿದ್ಯಾ ವಿನಯದಿ ಬಾಗುವೆನು

ಜನುಮವ ನೀಡಿದ ನಾಡಿನ ಪುಣ್ಯದ
ನೆಲದಲಿ ಭಕ್ತಿಯ ನಿಲಿಸುವೆನು
ಮನದಲಿ ಅನುದಿನ ಜನಗಳ ಬಗೆಗಿನ
ಪ್ರೀತಿಯ ಭಾವನೆ ಬೆಳೆಸುವೆನು

ದೇಹದ ಯೌವನ ಚಿಮ್ಮುವ ಚೇತನ
ದೇಶಕೆ ಅರ್ಪಣೆ ಮಾಡುವೆನು
ನಾಡಿನ ಗಡಿಯನು ಹೆಮ್ಮೆಯ ಗುಡಿಯನು
ಕಾಯಲು ಜೀವವ ನೀಡುವೆನು

* * *

# ಹಸಿರು ಹಾಡು



ಹಸಿರು ಹಾಡು ಹಾಡುವ
ನೆಲವ ಹಸಿರು ಮಾಡುವ

ನೋಟ ಎತ್ತ
ಬೀರಿ ದತ್ತ
ನಗುತ ಇರಲಿ ಎಲ್ಲಿಯೂ
ಸುತ್ತ ಮುತ್ತ
ಹಸಿರು ಹೊತ್ತ
ಮರವು ಗಿಡವು ಬಳ್ಳಿಯು

ನೆಲಕೆ ಚೆಲುವು
ಮನಕೆ ಗೆಲುವು
ಶುದ್ಧ ಗಾಳಿ ಉಸಿರಿಗೆ
ಹೂವು ಹಣ್ಣ
ನೂರು ಬಣ್ಣ
ಕಂಪು ತಂಪು ಹಸಿರಿಗೆ

ಹಲವು ಹತ್ತು
ಬಳಕೆ ವಸ್ತು
ಮಳೆಯು ಬೆಳೆಯು ಎಂದಿಗೂ
ಹಸರಿ ನೆಟ್ಟು
ಉಳಿಸಿ ಬಿಟ್ಟು
ಬೆಳೆಸಿದೆಲ್ಲ ಮಂದಿಗೂ

* * *

# ತುಂಟನ ಸವಾಲು



“ತುಂಟ ಪೋರ, ತಂಟೆ ಕೋರ”
ಎಂದು ನೀವು ನಿ- ತ್ಯ
ಬಂದು ನನ್ನ ಹಳಿವುದನ್ನ
ಬಲ್ಲೆ ನಾನು ಸ- ತ್ಯ

ಕಲಿಯಬೇಕು, ತಿಳಿಯ ಬೇಕು
ಬೆಳೆಯ ಬೇಕು ನಾ- ನು
ಎನುವ ಬಯಕೆ ಉಂಟು ಅದಕೆ
ಯತುನ ಬೇಡ ವೇ- ನು?

ತಿಳಿಯಲೆಂದು ಕಲಿಯಲೆಂದು
ನೋಡಿ, ಮೂಸಿ, ಮು- ಟ್ಟಿ
ಕೆಲಸ ನಾನೆ ಮಾಡು ತೇನೆ
ಹಿಡಿದು, ತಟ್ಟಿ, ಕು- ಟ್ಟಿ

ಅದನು ಇಂದು ತಂಟೆಯೆಂದು
ಕರೆಯುವವರೆ ಕೇ - ಳಿ
ಎಳವೆಯಲ್ಲಿ ನೀವು ಇಲ್ಲಿ
ಮಾಡಿದುದನು  ಹೇ- ಳಿ

* * *

# ಹೊಸ ವರುಷದ ಹಾಡು



ಹೊಸ ವರುಷ ಬರಲಿ
ಹೊಸ ಹರುಷ ತರಲಿ
ಹಳೆಯದನು ಹಿಂದೆ ದೂಡಿ
ಹೊಸ ಹಾಡ ಕೇಳಿ
ಹೊಸ ಭಾವ ತಾಳಿ
ಜನ ನಿಲಲಿ ಒಂದು ಗೂಡಿ

ಮತ ಭೇದ, ರೋಷ
ಮತ್ಸರವು, ದ್ವೇಷ
ಕೊಲೆ, ಸುಲಿಗೆ, ಹಿಂಸೆ ತೊಲಗಿ-
ಸೌಹಾರ್ದ ಬೆಳೆದು
ಮನ ಮನವ ಬೆಸೆದು
ಸುಖ-ಶಾಂತಿ-ಪ್ರೀತಿ-ಬೆಳಗಿ-

ಮನೆ ಮನೆಯ ಜನಕು
ನೆಮ್ಮದಿಯ ಬದುಕು
ಸಿಗುವಂಥ ಸುದಿನ ಬರಲಿ
ಸೌಭಾಗ್ಯ ಮಿಕ್ಕಿ
ಸಂತೋಷ ಉಕ್ಕಿ
ಜಗದಗಲ ಹರಿಯುತಿರಲಿ

* * *

# ಕನ್ನಡ



ಕಣ್ಣು ತೆರೆದು ಮೊದಲ ಬೆಳಕು
ನೋಡಿದಾಗ ನಾ- ನು
ಕೇಳಿದಂಥ ಮಾತು ಇದುವೆ
ಬಲ್ಲೆಯೇನು ನೀ- ನು

ತಾಯ ತೊಡೆಯ ತೊಟ್ಟಿಲಲ್ಲಿ
ಮಲಗಿದಾಗ ನಾ- ನು
ತೊದಲಿದಂಥ ಮಾತು ಇದುವೆ
ಬಲ್ಲೆಯೇನು ನೀ- ನು?

ಪ್ರೀತಿ ಹೊಂದಿ ಮನೆಯ ಮಂದಿ
ಆಡಿದಾಗ ನಾ- ನು
ಕಲಿತುಕೊಂಡ ಮಾತು ಇದುವೆ
ಬಲ್ಲೆಯೇನು ನೀ- ನು?

ಕನಸಿನಲ್ಲಿ ನೆನಸಿನಲ್ಲಿ
ಕಷ್ಟ-ಸುಖದಿ ನಾ-ನು
ನೆನೆವ, ನುಡಿವ ಮಾತು ಇದುವೆ
ಬಲ್ಲೆಯೇನು ನೀ-ನು?

* * *

# ನಾವು ಭಾರತೀಯರು



ನಾವು ಭಾರತೀಯರು
ದೇಶ ನಮ್ಮ ದೇವರು

ಹಿಂದು-ಮುಸ್ಲಿಂ ಎನುವುದಿಲ್ಲ
ಕ್ರೈಸ್ತ-ಸಿಕ್ಖ ಭೇದ ಸಲ್ಲ
ಒಂದೆ ತಾಯ ಮಕ್ಕಳೆಲ್ಲ
ನಾವು ಭಾರತೀಯರು……

ಭಾಷೆ, ಬಣ್ಣ ಬದಲಿ ತೆಂದು
ನಿಯಮ ನಿಷ್ಠೆ ಬೇರೆಯೆಂದು
ಮಾನವತೆಯ ಮರೆಯೆವಿಂದು
ನಾವು ಭಾರತೀಯರು ……

ಐಕ್ಯದಿಂದ ನಮಗೆ ಶಕ್ತಿ
ದುಡಿಮೆ, ಏಳ್ಗೆ ಪಡೆವ ಯುಕ್ತಿ
ಸೇವೆಯಿಂದ ಋಣದ ಮುಕ್ತಿ
ನಾವು ಭಾರತೀಯರು…..

* * *

# ಪರಿಸರ - ಜೀವನ



ಪರಿಸರವೆ ಜೀವನವ
ರೂಪಿಸುವ ಶಕ್ತಿ
ಅದನು ರಕ್ಷಿಸುವಲ್ಲಿ
ಇರಲಿ ಆಸಕ್ತಿ
ಪರಿಸರವು ಹದಗೆಡಲು
ಕೆಟ್ಟೀತು ಬಾಳು
ತಪ್ಪೀತು ಸುಖ ಶಾಂತಿ
ಹೆಚ್ಚೀತು ಗೋಳು

ಹೊಗೆ, ಧೂಳು, ವಿಷ ಬೆರೆತು
ವಾಯು ಮಾಲಿನ್ಯ
ತ್ಯಾಜ್ಯಗಳ ಸೇರ್ಪಡೆಗೆ
ಜಲದ ಮಾಲಿನ್ಯ
ಕಲಬೆರಕೆ ವಿಷಗಳಿಗೆ
ಅನ್ನ ಮಾಲಿನ್ಯ
ಸದ್ದು ಗದ್ದಲ ಮೀರಿ
ಶಬ್ದ ಮಾಲಿನ್ಯ

ಮಲಿನತೆಗೆ ಪರಿಸರವು
ಕೆಡದಂತೆ ನೋಡಿ
ಸೃಷ್ಟಿ ಸಂಪನ್ಮೂಲ
ರಕ್ಷಣೆಯ ಮಾಡಿ
ನೆಟ್ಟುಗಿಡ, ಮರ, ಬಳ್ಳಿ
ಬೆಳೆಸಿದರೆ ಹಸಿರು
ಉಳಿದೀತು ಜಗದೆಲ್ಲ
ಜೀವಿಗಳ ಉಸಿರು

* * *

# ನೀರು



ಗಾಳಿಯಂತೆ ಬೆಳಕಿನಂತೆ
ನೀರು ಮುಖ್ಯ ಬಾಳಿಗೆ
ನೀರು ಇಲ್ಲದೆಡೆಯೊಳಿಲ್ಲ
ಜೀವಿಗಳಿಗೆ ಏಳಿಗೆ

ಗಾಳಿಯಂತೆ ಕೆಡುವ ಚಿಂತೆ
ಕುಡಿವ ನಮ್ಮ ನೀರಿಗು
ನೀರು ಕೆಡಲು ನಾವು ಬಿಡಲು
ಸುಖವು ಇರದು ಯಾರಿಗೂ


ಊರ ಎಲ್ಲ ಕೊಳಕು ಮೆಲ್ಲ
ಬಂದು ನೀರಿಗಿಳಿವುದು
ವಿಷವು ಹಲವು, ಮೂತ್ರ-ಮಲವು
ಅದನು ಸೇರಿ ಕೊಳುವುದು

ನೀರ ಕೊಳಕು ನುಸಿಗು ಸೊಣಕು
ಜನುಮ ತಾಣ ತಿಳಿವುದು
ಅದುವೆ ಕಠಿಣ ರೋಗ ರುಜಿನ
ಹರಡಿ ನಮ್ಮ ಕೊಲುವುದು

ನೀರು ಹೀಗೆ ಕೆಡದ ಹಾಗೆ
ನೋಡಬೇಕು ನಿತ್ಯವು
"ರೋಗ ರಹಿತ ಬದುಕಿಗೆ ಹಿತ
ಶುದ್ಧ ನೀರು"- ಸತ್ಯವು

* * *

# ಪಡೆದಳು ನಮ್ಮನು ಭಾರತಮಾತೆ



ಪಡೆದಳು ನಮ್ಮನು ಭಾರತ ಮಾತೆ
ಮಹಿಮಳು ಮಾನ್ಯಳು ಜಗವಿಖ್ಯಾತೆ
ಬನ್ನಿರಿ, ಬಾಗುತ ನಮಿಸುವ ನಮ್ಮ
ಹರಸುತ ಕರುಣದಿ ಕಾಯಲಿ ಅಮ್ಮ

ಒಂದೇ ಮಡಿಲಲಿ ಹುಟ್ಟುತ ಬಂದ
ನಮ್ಮನು ಸೋದರ ಪ್ರೇಮದ ಗಂಧ
ಸೆಳೆಯುತ ಒಟ್ಟಿಗೆ ಬೆಸೆಯಲಿ ಇಂದು
ಒಮ್ಮನದಿಂದಲಿ ನಡೆಸಲಿ, ಮುಂದು

ನಾಡಿನ ನೆಲದಲಿ ಭಕ್ತಿಯ ನಿಟ್ಟು
ದ್ವೇಷದ ಸ್ವಾರ್ಥದ ಭಾವನೆ ಬಿಟ್ಟು
ನಮ್ಮಯ ಹಾಗೆಯೆ ಪರರನು ಕಂಡು
ಬದುಕಲು ಕಲಿತರೆ ಸವಿ ಸುಖ ಎಂದೂ

ಒಗ್ಗಟ್ಟಿದ್ದರೆ ಬರುವುದು ಬಲವು
ಕೂಡಿಯೆ ದುಡಿದರೆ ಒಲಿವುದು ಗೆಲವು
ಪ್ರೀತಿಯೊಳೆಲ್ಲರ ತಬ್ಬಿಯೆ ಹಿಡಿವ
ನೆಲದಲಿ ಸ್ವರ್ಗವ ಸೃಷ್ಟಿಸಿ ಬಿಡುವ

* * *

# ಕಲಿತರೆ ಆಗದೆ ಮನೆಯಲ್ಲೆ?



ಓ ನನ್ನಮ್ಮಾ ನಾನಿಲ್ಲೆ
ಕಲಿತರೆ ಆಗದೆ ಮನೆಯಲ್ಲೆ?

ಶಾಲೆಗೆ ಹೋಗಲು ದೊಡ್ಡದು ಗಂಟು
ಪುಸ್ತಕ ಬೆನ್ನಲಿ ಹೊರಲಿಕೆ ಉಂಟು
ಬೆಳಗೂ ಬೈಗೂ ಆ ಹೊರೆ ಹೊತ್ತು
ನೋಯುವುದಮ್ಮಾ ಬೆನ್ನೂ ಕತ್ತೂ

ಶಾಲೆಗೆ ಹೋದರೆ ಕೋಣೆಯ ಒಳಗೆ
ಕೂಡಿಸಿ ಬಿಡುವರು ಸಂಜೆಯ ವರೆಗೆ
ಓದೂ ಬರೆಹವು ಗಣಿತವು ಮತ್ತು
ಪ್ರಶ್ನೆಯು - ಉತ್ತರ ಎರಡು ಹೊತ್ತು

ತಂಗಾಳಿಯ ಉಸಿರಾಡಲು ಇಲ್ಲ
ಬಣ್ಣದ ಹೂಗಳ ನೋಡಲು ಇಲ್ಲ
ಹಕ್ಕಿಯ ಹಾಡನು ಕೇಳಲು ಇಲ್ಲ
ಚಿಟ್ಟೆಯ ಜೊತೆ ನಲಿದಾಡಲು ಇಲ್ಲ

ಕಣ್ಣಲಿ ಕಾಣುತ ಕೈಯಲಿ ಮುಟ್ಟಿ
ಕೆಲಸದ ಅನುಭವ ಪಡೆದುದೆ ಗಟ್ಟಿ
ಅಂಥದು ಎಂದಿಗೆ ಬರುವುದೊ ಆಗ
ಶಾಲೆಗೆ ಖುಷಿಯಲೆ ಹೋಗುವೆ ಬೇಗ

* * *

# ಜಾಣ ಮಂತ್ರಿ



ಹಿಂದೆ ಒಬ್ಬನು ಅರಸನಿದ್ದನು
ಬುದ್ದಿಯಲಿ ಬಲು ಮೂಢನು
ಯಾರ ಮಾತನು ಕೇಳನಾತನು
ಒಳಿತನೇನನು ಮಾಡನು

ಒಮ್ಮೆ ರಾಜನು ಊರ ನದಿಯನು
ನೋಡಿ ಕೇಳಿದ ಮಂತ್ರಿಗೆ-
"ಭಾರಿ ನೀರಿದು ಭರದಿ ಹರಿವುದು
ಹೋಗಿ ಸೇರುವುದೆಲ್ಲಿಗೆ?"

"ದೂರ ಪೂರ್ವಕೆ ಇರುವ ರಾಜ್ಯಕೆ
ನೀರು ಹರಿವುದು ನಿತ್ಯವು
ಅಲ್ಲಿ ಜನರಿಗೆ ದಿನದ ಬದುಕಿಗೆ
ಇದುವೆ ಆಸರೆ ಸತ್ಯವು"

ಮಂತ್ರಿ ಹೇಳಿದ ಮಾತು ಕೇಳಿದ
ಒಡೆಯ ನುಡಿದನು, "ನೀರಿದು
ನಮ್ಮ ನದಿಯದು ನಮಗೆ ಸಲುವುದು
ಅಲ್ಲ ಪರರದು ಯಾರದೂ"

"ಕಲ್ಲು ಒಟ್ಟಿರಿ, ಕಟ್ಟೆ ಕಟ್ಟಿರಿ
ನೀರು ಇಲ್ಲೇ ನಿಲ್ಲಲಿ
ಇನ್ನು ಮುಂದಕೆ ಊರ ಮಂದಿಗೆ
ಮಾತ್ರ ನೀರಿದು ಸಲ್ಲಲಿ"

ಅರಸ ಅಪ್ಪಣೆ ಕೊಡಲು ಥಟ್ಟನೆ
ಮಂತ್ರಿ ಕೆಲಸ ತೊಡಗಿದ

ಅಣೆಯ ಕಟ್ಟನು ನಿಲಿಸಿ ಬಿಟ್ಟನು
ಮತ್ತೆ ಯೋಚಿಸಿ ನಡುಗಿದ

ನೀರು ಸೇರಿತು ಮೇಲ ಕೇರಿತು
ಎಲ್ಲ ಕಡೆ ನೆರೆ ತುಂಬಿಯು-
ಹಟ್ಟಿ ಕೊಟ್ಟಿಗೆ ಮನೆಯನೊಟ್ಟಿಗೆ
ಬಿಟ್ಟು ಓಡಿತು ಮಂದಿಯು

'ರಾಜ ಮೂರ್ಖನು, ಮಾತು ಕೇಳನು'
ಮಂತ್ರಿ ಯೋಚನೆ ಮಾಡಿದ
ಜನರ ಕಷ್ಟವ ದೂರ ಮಾಡುವ
ತಂತ್ರವೊಂದನು ಹೂಡಿದ

ಇರುಳು ನಡುವಿನ ಘಂಟೆ ಘಣ ಘಣ
ಆರು ಸಾರಿಯೆ ಮೊಳಗಲು
"ಸೂರ್ಯ ಮೂಡಲೆ ಇಲ್ಲ ಏನೆಲೆ?"
ಎಂದು ಅರಸನು ಕೇಳಲು-

"ಮೂಡಣೂರಿಗೆ ಕೊರತೆ ನೀರಿಗೆ
ಬಂದು ಬಿಟ್ಟಿದೆ ಈ ದಿನ
ಅಲ್ಲಿ ಸೂರ್ಯನ ತಡೆದು ಹಗೆತನ
ತೀರಿಸುತಲಿದೆ ಆ ಜನ"

ಮಂತ್ರಿ ಎಂದುದ ರಾಜ ನಂಬಿದ
ನುಡಿದ, "ಕಟ್ಟವ ಕಡಿಸಿರಿ
ಕೊಟ್ಟು ನೀರನು, ಪಡೆದು ಬೆಳಕನು
ಸೂರ್ಯನನು ಸೆರೆ ಬಿಡಿಸಿರಿ"

ಜನರು ನಡೆದರು ಒಡ್ಡನೊಡೆದರು
ನೀರು ಹರಿಯಿತು ಬಳ ಬಳ
ಇರುಳು ಕಳೆಯಿತು ಬಾನು ಬೆಳಗಿತು
ಸೂರ್ಯ ಹೊಳೆದನು ಥಳ ಥಳ

* * *

# ದೇವ ತಾನೆ ಜಗದ ತಂದೆ



ದೇವ ತಾನೆ ಜಗದ ತಂದೆ
ನಾವು ಅವನ ಮಕ್ಕಳು
ಭೂಮಿ ದೇವಿ ನಮ್ಮ ತಾಯಿ
ಅವಳೆ ನಮ್ಮ ಹೆತ್ತಳು

ಒಂದೆ ಮನೆಯ ಮಂದಿ ನಾವು
ಬಂಧು ಬಳಗ ಎಲ್ಲವು
ಪ್ರೀತಿ-ಕರುಣೆ ಮೀರಿದಂಥ
ಧರ್ಮ ಬೇರೆ ಇಲ್ಲವು

ಒಂದೆ ಕೈಯ ಬೆರಳುಗಳಲು.
ಒಂದೆ ಬಗೆಯು ಎಲ್ಲಿದೆ?
ಭಾಷೆ-ಬಣ್ಣ, ರೀತಿ-ನೀತಿ
ರೂಪ ಭೇದ ಇಲ್ಲಿದೆ

ಒಬ್ಬಗೊಬ್ಬ ನೆರವು ನೀಡಿ
ಸತ್ಯಪಥದಿ ನಡೆಯುವ
ಬದುಕಿ ಒಟ್ಟು ಬದುಕ ಬಿಟ್ಟು
ಶಾಂತಿ ಸುಖವ ಪಡೆಯುವ

* * *

# ಮಕ್ಕಳ ಮಾತು



ಎಲ್ಲೇ ಇರ್ಲಿಽ ಯಾರೇ ಇರ್ಲಿಽ
ದೊಡ್ಡವರಾದೋರೆಲ್ಲ
ಆಡೋದ್ರಲ್ಲಿ ಮಾಡೋದ್ರಲ್ಲಿ
ನಮ್ ಹಂಗಂತೂ ಅಲ್ಲ.
ಬಣ್ಣದ ಹೂವೇ ನಗ್ತಾ ಇದ್ರೂ
ನೋಡೋದಿಲ್ಲ ನಿಂದು
ರಾಗದ ಹಕ್ಕೀ ಹಾಡ್ತಾ ಇದ್ರೂ
ಕೇಳೋದಿಲ್ಲ ಬಂದು.
ಹೊಸ್ತೇನಾದ್ರೂ ಕಾಣಿಸ್ಕೊಂಡ್ರೂ
ಏನದು, ಏಕೆ, ಹೇಗೆ
ಎನ್ನೋದೇನೂ ಯೋಚ್ನೆ ಮಾಡ್ದೇ
ಇದ್ಬಿಡ್ತಾರೆ ಹಾಗೇ.

ಅಂಥೌರೆಲ್ಲ ಮಾತಾಡೋರು
ಸಂದರ್ಭಕ್ಕೆ ತಕ್ಕ
ಕೋಪಽ ಗೀಪಽ ದುಃಖಽ ಗಿಕ್ಕಽ
ಮರೆಯೋರಲ್ಲ ಫಕ್ಕ.
ಭೇದಽ ಬಿಟ್ಟು ಕೂಡಿಽ ಒಟ್ಟು
ಆಡಿಽ ಹಾಡಿಽ ನಕ್ಕು
ನಮ್ ಹಂಗೇನೇ ನಲಿಯೋದಲ್ವೆ
ಎಲ್ಲಗ್ರೂ ಲಾಯಕ್ಕು?

***